CW.2 PW.1

ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ

CC No.424/2020

| | |
|---|---|
| ಸಾಕ್ಷಿದಾರರ ಹೆಸರು | ವೆಂಕಟೇಶ್ |
| ತಂದೆಯ ಹೆಸರು | ನಾರಾಯಣಪ್ಪ |
| ವಯಸ್ಸು | 49 ವರ್ಷ |
| ವೃತ್ತಿ | ಸೆಲೂನ್ |
| ವಿಳಾಸ | ಕೊಳಗೊಂಡನಹಳ್ಳಿ ಗ್ರಾಮ |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 21.02.2025 |

ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-

ನನಗೆ ನ್ಯಾಯಾಲಯದ ಮುಂದಿರುವ 2 ನೇ ಆರೋಪಿಯು ಗೊತ್ತು. ಚಾಸಾ-1 ನನ್ನ ಹೆಂಡತಿ. ಚಾಸಾ-3 ರಿಂದ ಚಾಸಾ-6 ರವರು ಗೊತ್ತು.

ನಮಗೂ ಮತ್ತು ಆರೋಪಿತರಿಗೂ ಕೆಲವೊಂದು ವಿಚಾರಕ್ಕೆ ಸಂಬಂಧಿಸಿದಂತೆ ನಮ್ಮಗಳ ನಡುವೆ ಮನಸ್ತಾಪಗಳು ಇದ್ದು ಆರೋಪಿತರು ನಮಗೆ ತೊಂದರೆ ಕೊಡುವ ವಿಚಾರಕ್ಕೆ ಸಂಬಂಧಿಸಿದಂತೆ ಅವರಿಗೆ ಬುದ್ದಿವಾದ ಹೇಳುವಂತೆ ಚಾಸಾ-1 ರವರು ಕೋಡಿಹಳ್ಳಿ ಪೋಲಿಸ್ ಠಾಣಾ ರವರಿಗೆ ಕೇಳಿಕೊಂಡಿದ್ದೆ. ಅದರಂತೆ ಪೋಲಿಸರು ನಮ್ಮನ್ನು ಮತ್ತು ಆರೋಪಿತರನ್ನು ಠಾಣೆಗೆ ಕರೆಯಿಸಿ ಆರೋಪಿಗೆ ಬುದ್ದಿವಾದ ಹೇಳಿ ಕಳುಹಿಸಿರುತ್ತಾರೆ. ಆರೋಪಿತರು ನನಗೆ ಮತ್ತು ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ, ನನ್ನ ಕೊರಳ ಪಟ್ಟಿಯನ್ನು ಹಿಡಿದು ಹಲ್ಲೆ ಮಾಡಿಲ್ಲ, ನನ್ನ ತಲೆಗೆ, ಮೈಕೈಗೆ ಕಾಲುಗಳಿಗೆ ಮುಖಕ್ಕೆ ಮತ್ತು ಸೊಂಟಕ್ಕೆ ಕಡ್ಡಿಯಿಂದ ಹೊಡೆದು ತಿವಿದು ಹಲ್ಲೆ ಮಾಡಿಲ್ಲ, ಚಾಸಾ-1 ರವರ ಕೈ ಹಿಡಿದು ಎಳೆದಾಡಿ ಆಕೆಯ ಜುಟ್ಟು ಹಿಡಿದು ಎಳೆದಾಡಿ ಆಕೆಯ ಕಪಾಳಕ್ಕೆ ಹೊಡೆದು ಹಲ್ಲೆ ಮಾಡಿಲ್ಲ. ಆರೋಪಿತರ ವಿರುದ್ದ ಚಾಸಾ-1 ರವರು

ದೂರು ನೀಡಿದ ಬಗ್ಗೆ ನನಗೆ ಮಾಹಿತಿ ಇಲ್ಲ. ಆರೋಪಿತರು ನನಗೆ ಹಲ್ಲೆ ಮಾಡಿರುತ್ತಾನೆ ಎಂದು ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಸ ಸ ಅ ರವರು ಕೋರಿದ್ದು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ ಸ ಅ ರವರಿಗೆ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ- ಸ ಸ ಅ ರವರಿಂದಃ-

ದಿಃ 22.10.2019 ರಂದು ರಾತ್ರಿ 9 ಗಂಟೆ ಸಮಯದಲ್ಲಿ ಡ್ರಾಪ್ ಮಾಡುವ ವಿಚಾರಕ್ಕೆ ಸಂಬಂಧಿಸಿದಂತೆ ಆರೋಪಿತರು ನನಗೆ ಕರೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿಯಲ್ಲ. ನಂತರ ಅದೇ ದಿನ ರಾತ್ರಿ 9.45 ಗಂಟೆಗೆ ಆರೋಪಿತರು ನಮ್ಮ ಬಳಿ ಬಂದು ಯಾಕೆ ನಮ್ಮನ್ನು ಡ್ರಾಪ್ ಮಾಡಲಿಲ್ಲ ಎಂದು ಜಗಳ ತೆಗೆದು ನನಗೆ ಮತ್ತು ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಹಲ್ಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ಆ ದಿನ ಚಾಸಾ-1 ರವರ ತಲೆ ಜುಟ್ಟು ಹಿಡಿದು ಎಳೆದಾಡಿ ಕೈ ಬಳೆ ಹೊಡೆದು ಆಕೆಗೆ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆಗ ಜಗಳವನ್ನು ಚಾಸಾ-5 ಮತ್ತು ಚಾಸಾ-6 ರವರು ಬಂದು ಬಿಡಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಹಲ್ಲೆಯಿಂದಾಗಿ ನಾವುಗಳು ಕನಕಪುರದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಸಹ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಈ ವಿಚಾರಕ್ಕೆ ಸಂಬಂಧಿಸಿದಂತೆ ಚಾಸಾ-1 ರವರು ದಿಃ23.10.2019 ರಂದು ಮದ್ಯಾಹ್ನ 3 ಗಂಟೆಗೆ ದೂರು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ನನಗೆ ಮತ್ತು ಚಾಸಾ-1 ರವರಿಗೆ ಹಲ್ಲೆ ಮಾಡಿದ್ದರು ಚಾಸಾ-1 ರವರ ಜುಟ್ಟು ಹಿಡಿದು ಎಳೆದಾಡಿ ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿಯಲ್ಲ. ಈ ಮೇಲಿನ ವಿಚಾರಕ್ಕೆ ಸಂಬಂಧಿಸಿದಂತೆ ನಾನು ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ಹೇಳಿಕೆಯ ಭಾಗವನ್ನು ನಿಪಿ-1 ಎಂದು ಗುರುತಿಸಲಾಯಿತು.

ನಾನು ಆರೋಪಿತರ ಜೊತೆ ನ್ಯಾಯಾಲಯದ ಹೊರಗಡೆ ಊರಿನ ಹಿರಿಯರ ಮಾತು ಕೇಳಿ ರಾಜೀ ಮಾಡಿಕೊಂಡಿರುತ್ತೇನೆಂದರೆ ಸರಿ. ಆರೋಪಿತರೊಂದಿಗೆ

ನ್ಯಾಯಾಲಯದ ಹೊರಗಡೆ ರಾಜೀ ಮಾಡಿಕೊಂಡ ಕಾರಣ ಆರೋಪಿತರು ನನಗೆ ಮತ್ತು ಚಾಸಾ-1 ರವರಿಗೆ ಹಲ್ಲೆ ಮಾಡಿ ಅವಮಾನ ಮಾಡಿದ್ದರೂ ಮತ್ತು ಅವಾಚ್ಯ ಶಬ್ದಗಳಿಂದ ಬೈದಿದ್ದರೂ, ಕೈಗಳಿಂದ ಹಲ್ಲೆ ಮಾಡಿದ್ದರೂ ಹಲ್ಲೆ ಮಾಡಿಲ್ಲ, ಅವಮಾನ ಮಾಡಿಲ್ಲ, ಬೈದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಿಪಿ-1 ರ ಸಂಗತಿಗಳು ಗೊತ್ತಿದ್ದರೂ ಗೊತ್ತಿಲ್ಲ ಎಂದು ಉದ್ದೇಶಪೂರ್ವಕವಾಗಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀಸವಾಲುಃ ಇಲ್ಲ

ಮರುವಿಚಾರಣೆಃ ಇರುವುದಿಲ್ಲ

ಓ ಹೇ ಕೇ ಸರಿ ಇದೆ

(ರಾಧಾ ಎಸ್.)
ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,
ಕನಕಪುರ .